ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಇ.ವಿ.ಜಿ/ಮ.ಬಿ.ಕಾ/2022-23 ದಿನಾಂಕ: 13.05.2022

## ಸುತ್ತೋಲೆ

ವಿಷಯ: 2022-23 ನೇ ಶೈಕ್ಷಣಿಕ ವರ್ಷದಲ್ಲಿ " ಮಳೆಬಿಲ್ಲು ಕಾರ್ಯಕ್ರಮವನ್ನು" ಶಾಲೆಗಳಲ್ಲಿ ಅನುಷ್ಠಾನಗೊಳಿಸುವ ಬಗ್ಗೆ

ಉಲ್ಲೇಖ: 1. ಎಡಿಎಂ.2(1):ಶೈ.ವ.ನಿ:02:2021-22 ದಿ. 15.02.22

2. ಈ ಕಛೇರಿ ಸು.ಸ.ಸಂ: DSERT/EVG/2022-23 ಅ.ಹಾ/32/2021-22 ದಿ: 04.3.2022

**********

ವಿಷಯಕ್ಕೆ ಸಂಬಂಧಿಸಿದಂತೆ ಹಿಂದಿನ ಎರಡು ವರ್ಷಗಳಲ್ಲಿ ಮಕ್ಕಳು ಶಾಲಾ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಶಾಲಾ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಕ್ಕಳಲ್ಲಿ ಉತ್ಸಾಹವನ್ನು ಹುರಿದುಂಬಿಸಿ, ಅವರಿಗೆ ಉತ್ತಮ ಕಲಿಕಾ ಅನುಭವವನ್ನು ನೀಡುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಸರ್ಕಾರವು 2022-2023 ನೇ ಶೈಕ್ಷಣಿಕ ವರ್ಷವನ್ನು **"ಕಲಿಕಾ ಚೇತರಿಕೆ ವರ್ಷ"** ಎಂದು ಘೋಷಿಸಿದ್ದು, ಕಲಿಕಾ ಚೇತರಿಕೆ ಎಂಬ ವಿನೂತನ ಉಪಕ್ರಮವನ್ನು ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ 1 ರಿಂದ 9 ನೇ ತರಗತಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಸದರಿ ಉಪಕ್ರಮದ ಪೂರ್ವಸಿದ್ಧತೆಗಾಗಿ ಕಲಿಕಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲು ಶಾಲಾ ಆರಂಭವನ್ನು ಮಗು ಹಬ್ಬದಂತೆ ಆಚರಿಸುವ ಸಲುವಾಗಿ ಮಕ್ಕಳ ಸ್ನೇಹಿ ಚಟುವಟಿಕೆಗಳಿಂದ ಶಾಲೆಯನ್ನು ಆರಂಭಿಸುವುದು. ಈ ನಿಟ್ಟಿನಲ್ಲಿ ಮಗು ಸಂತಸದಿಂದ ಆನಂದಿಸಿ ಅನುಭವಿಸುವಂತೆ ಮಾಡುವ ಚಟುವಟಿಕೆಗಳನ್ನು ನಡೆಸುತ್ತಾ ಹೋಗುವಂತೆ ಅನೂಕೂಲವಾಗಿಸಲು ಶಾಲಾ ಪ್ರಾರಂಭದ ಮೊದಲ ಎರಡು ವಾರಗಳಿಗೆ **"ಮಳೆಬಿಲ್ಲು"** ಕಾರ್ಯಕ್ರಮವನ್ನು ಯೋಜಿಸಿದೆ.

ಕಾರ್ಯಕ್ರಮವನ್ನು ಶಾಲೆಗಳಲ್ಲಿ ಯೋಜಿಸಲು ಸಲಹಾತ್ಮಕ ಚಟುವಟಿಕೆಗಳನ್ನು ಒಳಗೊಂಡ ಮಳೆಬಿಲ್ಲು ಶಿಕ್ಷಕರ ಕೈಪಿಡಿಯನ್ನು ಒದಗಿಸಿದ್ದು, ಅದರಂತೆ ಕ್ರಮವಹಿಸುವುದು.

**"ಮಳೆಬಿಲ್ಲು" ಕಾರ್ಯಕ್ರಮವನ್ನು ಶಾಲೆಗಳಲ್ಲಿ ಆಯೋಜಿಸಲು ಶಾಲಾ ಮುಖ್ಯಸ್ಥರು ಹಾಗೂ ಶಿಕ್ಷಕರು ಅನುಸರಿಸಬೇಕಾದ ಕ್ರಮಗಳು:**

- 1 ರಿಂದ 9ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ಆಯಾ ವಯೋಮಾನಕ್ಕನುಗುಣವಾಗಿ ಆಯಾ ಶಾಲಾ ಭೌಗೋಳಿಕ ಸನ್ನಿವೇಶಗಳಿಗೆ ಅನುಗುಣವಾಗಿ ಮಳೆಬಿಲ್ಲು ಚಟುವಟಿಕೆಗಳನ್ನು ಆಯೋಜಿಸುವುದು.
- ವಿದ್ಯಾರ್ಥಿಗಳಿಗೆ ಯಾವುದೇ ದೈಹಿಕ ಮತ್ತು ಮಾನಸಿಕ ತೊಂದರೆ ಉಂಟಾಗದಂತೆ ಶಿಸ್ತಿನಿಂದ ಚಟುವಟಿಕೆಗಳನ್ನು ಆಯೋಜಿಸುವುದು ಹಾಗೂ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಪ್ರತ್ಯಕ್ಷ ಅನುಭವಗಳನ್ನು ಪಡೆಯಲು ಹೆಚ್ಚು ಆದ್ಯತೆ ಒದಗಿಸುವುದು.
- ಸಂಬಂಧಿಸಿದ ಯೋಜನೆಯನ್ನು ಮೊದಲೇ ಸಿದ್ಧಪಡಿಸಿಕೊಂಡು, ಯಾವುದೇ ಆರ್ಥಿಕ ಹೊರೆ ಆಗದಂತೆ ಲಭ್ಯ ಸಂಪನ್ಮೂಲಗಳನ್ನು ಬಳಸಿಕೊಂಡು ಚಟುವಟಿಕೆಗಳನ್ನು ಆಯೋಜಿಸುವುದು.
- ಚಟುವಟಿಕೆ ಪ್ರಾರಂಭಿಸುವ ಮುನ್ನ ಅಗತ್ಯ ಸೂಚನೆಗಳನ್ನು ನೀಡಿ ಎಲ್ಲಾ ಮಕ್ಕಳು ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಮಕ್ಕಳಲ್ಲಿ ಅಂಜಿಕೆ, ಹಿಂಜರಿಕೆ ಮತ್ತು ಭಯ ಬರದಂತೆ ಮುಕ್ತವಾಗಿ ಅಭಿವ್ಯಕ್ತಿಸಲು ಸೂಕ್ತ ಮಾರ್ಗದರ್ಶನ ನೀಡುವುದು.
- **"ಮಳೆಬಿಲ್ಲು"**ಕೈಪಿಡಿಯಲ್ಲಿ ಸೂಚಿಸಿರುವ ತರಗತಿವಾರು ಆಟ/ಚಟುವಟಿಕೆಗಳನ್ನು ವಿವಿಧ ತರಗತಿಗಳಿಗೆ, ವಯೋಮಾನಕ್ಕೆ ಅನುಗುಣವಾಗಿ ಸಂಯೋಜಿಸಿ ನಿರ್ವಹಿಸುವುದು.
- **"ಮಳೆಬಿಲ್ಲು"**ಕೈಪಿಡಿಯಲ್ಲಿ ಸೂಚಿಸಿರುವ ಆಟಗಳು/ಚಟುವಟಿಕೆಗಳು ಮಕ್ಕಳು ಶಾಲಾ ಪರಿಸರಕ್ಕೆ ಹೊಂದಿಕೊಳ್ಳಲು ರೂಪಿಸಲಾಗಿದೆ. ಹಾಗಾಗಿ ಈ ಆಟಗಳ ಮೂಲಕ ಯಾವುದೇ ಸ್ಪರ್ಧೆಗಳನ್ನು ನಡೆಸುವಂತಿಲ್ಲ ಹಾಗೂ ಬಹುಮಾನಗಳಿಗೆ ಅವಕಾಶ ಇರುವುದಿಲ್ಲ.
- ಯೋಜನೆ/ಚಟುವಟಿಕೆ ತಯಾರಿಕಾ ಹಂತದಲ್ಲಿ ಪ್ರತೀ ಸಂದರ್ಭದಲ್ಲಿಯೂ, ಕಾರ್ಯಕ್ರಮ ನಡೆಸುವಾಗ ಶಿಕ್ಷಕರು ಜೊತೆಗಿದ್ದು ಚಟುವಟಿಕೆಗಳನ್ನು ನಿರ್ವಹಿಸುವುದು.
- ಮೇಲಿನ ಎಲ್ಲಾ ಕ್ರಮಗಳನ್ನು ಅನುಸರಿಸಿ **"ಮಳೆಬಿಲ್ಲು"**ಚಟುವಟಿಕೆಗಳ ಮೂಲಕ ಮಕ್ಕಳನ್ನು ಹುರಿದುಂಬಿಸಿ 2022-2023ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳನ್ನು ಸನ್ನದ್ಧರನ್ನಾಗಿಸಲು ಕ್ರಮ ಕೈಗೊಳ್ಳುವುದು.

13.05.2022

(ಪಲ್ಲವಿ ಆಕುರಾತಿ)
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ

**ಪ್ರತಿಯನ್ನು:**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
4. ಅಪರ ಆಯುಕ್ತರು, ಸಾ.ಶಿ.ಇ ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ ಸಾ.ಶಿ.ಇ ಕಲಬುರಗಿ ಆಯುಕ್ತಾಲಯ ರವರಿಗೆ ಮಾಹಿತಿಗಾಗಿ.
5. ರಾಜ್ಯದ ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ.
6. ಕಛೇರಿ ಪ್ರತಿ.